2) ಬಂದಿದೆ. ಸಚಿವಾಲಯದ ನೌಕರರ ಸಂಘದಿಂದ ಒಂದು ಮನವಿ ಬಂದಿದ್ದು ಅದು ಸರ್ಕಾರದ ಪರಿಶೀಲನೆಯಲ್ಲಿದೆ.

3) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ವಿವೇಕನಗರಕ್ಕೆ ಪೋಲಿಸ್ ಠಾಣೆಯ ಕಟ್ಟಡ.

901(1480) ಶ್ರೀ ಎಂ.ಮುನಿಸ್ವಾಮಿ(ಶಾಂತಿನಗರ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಾಂತಿನಗರ ಕ್ಷೇತ್ರದದಲ್ಲಿರುವ ವಿವೇಕನಗರಕ್ಕೆ ಪೋಲಿಸ್ ಠಾಣೆಯನ್ನು ಕಾಟ್ಟಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿವೇಶನವನ್ನು ಗೊತ್ತುಪಡಿಸಿರುತ್ತಾರೆಯೇ?

ಆ) ಹಾಗಿದ್ದಲ್ಲಿ ನಿವೇಶನವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೇ?

ಇ) ಕಟ್ಟಡವನ್ನು ಕಟ್ಟಲು ಅಂದಾಜು ವೆಚ್ಚವನ್ನು ತಯಾರಿಸಲಾಗಿದೆಯೇ?

ಈ) ಹಾಗಿದ್ದಲ್ಲಿ ನಿರ್ಮಾಣವನ್ನು ಯಾವಾಗ ಕೈಗೊಂಡು ಯಾವಾಗ ಮುಗಿಸಲಾಗುತ್ತದೆ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು):-

ಅ) ನಿವೇಶನವನ್ನು ಹಂಚಿಕೆ ಮಾಡಿರುತ್ತಾರೆ.

ಆ) ದಿನಾಂಕ: 19-6-1984ರಲ್ಲಿ ವಶಕ್ಕೆ ತಗೆದುಕೊಳ್ಳಲಾಗಿದೆ.

ಇ) ಇಲ್ಲ.

ಈ) ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ಬೆಂಗಳೂರು-ಬೆಳಗಾವಿ ನಡುವೆ ಪ್ರತಿನಿತ್ಯ ಸಂಚರಿಸುವ ಬಸ್ಸುಗಳ ಸಂಖ್ಯೆ.

904(1515) ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು-ಬೆಳಗಾವಿ ನಡುವೆ ಪ್ರತಿನಿತ್ಯ ಸಂಚರಿಸುವ ಬಸ್ಸುಗಳ ಸಂಖ್ಯೆ;

ಆ) ರೈಲ್ವೆ ಇಲಾಖೆಯವರು ಪರಿವರ್ತನೆ ನಿಮಿತ್ತ ಸದರೀ ಮಾರ್ಗದಲ್ಲಿ ಸಾರಿಗೆ ಸಂಸ್ಥೆ ವತಿಯಿಂದ ಹೆಚ್ಚುವರಿ ಬಸ್ಸುಗಳನ್ನು ಓಡಿಸಲಾಗುತ್ತದೆಯೇ;

ಇ) ಹಾಗಿದ್ದಲ್ಲಿ ಹೆಚ್ಚುವರಿ ಬಸ್ಸುಗಳ ಸಂಖ್ಯೆ ಎಷ್ಟು;

ಈ) ಬೆಂಗಳೂರು-ಅರಸೀಕೆರೆ ನಡುವೆ ಹೆಚ್ಚುವರಿಯಾಗಿ ಪ್ರಾರಂಭಿಸಲಾದ ಬಸ್ಸುಗಳ ಸಂಖ್ಯೆ ಎಷ್ಟು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):-